ಭಕ್ತರ ಬಂಧು ಸುಬ್ರಹ್ಮಣ್ಯಸ್ವಾಮಿ

ಕಥೆ: ಸಿಯಾಂ
ಚಿತ್ರ: ಶಂಕರ್

ತಮಿಳುನಾಡಿನ ಮದುರೈ ಬಳಿ ತಿರುಪ್ಪರಕುಂದ್ರಂ ಎಂಬುದು ಒಂದು ಸಣ್ಣ ಊರು. ಅಲ್ಲಿ ಗರ್ಗಿಮುಖ ಎನ್ನುವ ಕುದುರೆಮುಖದ ರಾಕ್ಷಸಿಯೊಬ್ಬಳು ಗುಹೆಯೊಂದರಲ್ಲಿ ವಾಸಿಸುತ್ತಿದ್ದಳು. ಯಾರಾದರೂ ಶಿವನಪೂಜೆಯಲ್ಲಿ ಏನಾದರೂ ತಪ್ಪು ಮಾಡಿದರೆ, ಅಂತಹವರನ್ನು ಹಿಡಿದು, ತನ್ನ ಗುಹೆಯಲ್ಲಿ ಬಂಧಿಸಿಡುತ್ತಿದ್ದಳು. ಅಂತಹ ಒಂಬೈನೂರ ತೊಂಬತ್ತೊಂಬತ್ತು ಭಕ್ತರನ್ನು ಬಂಧಿಸಿ ಇಟ್ಟು, ಮತ್ತೊಬ್ಬ ದೊರೆತರೆ, ಎಲ್ಲರನ್ನೂ ಕಾಳಿಗೆ ಬಲಿ ಕೊಡಬಹುದು ಎಂದು ಕಾಯುತ್ತಿದ್ದಳು.

ನಕ್ಕೀರನೆಂಬವನು ಒಬ್ಬ ದೊಡ್ಡ ಶಿವಭಕ್ತನಾಗಿದ್ದನು. ಒಂದು ದಿನ ಅವನು ನದಿಯಲ್ಲಿ ಸ್ನಾನ ಮಾಡಿ, ಒಂದು ಮರದ ಕೆಳಗಡೆ ಕುಳಿತು ಶಿವಪೂಜೆಯನ್ನು ಆರಂಭಿಸಿದನು.

ಆಗ, ದೊಡ್ಡ ಬಿರುಗಾಳಿ ಬೀಸಿ, ಎಲೆಗಳೆಲ್ಲಾ ಕೆಳಗೆ ಉದುರಲಾರಂಭಿಸಿದವು. ನದಿಯಲ್ಲಿ ಬಿದ್ದ ಒಂದು ಎಲೆ ಮೀನಾಗಿ ಪರಿವರ್ತನೆ ಹೊಂದಿತು. ದಡದ ಮೇಲೆ ಬಿದ್ದ ಮತ್ತೊಂದು ಎಲೆ ಒಂದು ಪಕ್ಷಿಯಾಕಾರ ತಾಳಿತು. ಆ ಪಕ್ಷಿಯು ಮೀನನ್ನು ದಡಕ್ಕೆ ಎಳೆಯಲಾರಂಭಿಸಿತು. ಆ ಮೀನು ಪಕ್ಷಿಯನ್ನು ನೀರಿಗೆಳೆಯಲಾರಂಭಿಸಿತು. ನಕ್ಕೀರನು ತನ್ನ ಪೂಜೆಯನ್ನು ನಿಲ್ಲಿಸಿ, ಅವುಗಳ ಸೆಣೆಸಾಟವನ್ನು ಕುತೂಹಲದಿಂದ ನೋಡುತ್ತಿದ್ದ.



ಇದು ನಕ್ಕೀರನನ್ನು ಬಂಧಿಸಲು ಆ ಮಾಯಾವಿ ಹೂಡಿದ ತಂತ್ರವಾಗಿತ್ತು.

ನೀನು ಸರಿಯಾಗಿ ಮನಸ್ಸಿಟ್ಟು ಪೂಜೆ ಮಾಡಲಿಲ್ಲ ಅಲ್ಲವೆ?

4

ಅವನನ್ನು ಬಂಧಿಸಿ, ತನ್ನ ಸೆರೆಯಲ್ಲಿದ್ದ ೨೨೨ ಜನ ಸೆರೆಯಾಳುಗಳೊಡನೆ ಇಟ್ಟನು.

ಈಗ ಒಂದು ಸಾವಿರ ಸೆರೆಯಾಳುಗಳಾದರು. ನದಿಗೆ ಹೋಗಿ ಸ್ನಾನ ಮಾಡಿ ಬರೋಣ.

5

ಅಲ್ಲಿದ್ದ ಸೆರೆಯಾಳುಗಳೆಲ್ಲಾ ದುಃಖದಿಂದ ಪರಿತಾಪ ಪಡುತ್ತಿದ್ದರು.

ಅಳಬೇಡಿ, ಏನಾಯಿತು ಹೇಳಿ?

6

ಅಯ್ಯೋ ಪಾಪಿ, ನಿನ್ನಿಂದಾಗಿ ಈಗ ನಾವು ಬಲಿಯಾಗುತ್ತೇವೆ.

ನಿರ್ಭಯಿಯಾದ ನಕ್ಕೀರನ್, ಅವರಿಂದ ಎಲ್ಲಾ ವಿಷಯಗಳನ್ನು ತಿಳಿದುಕೊಂಡ.

ಓಹೋ! ಕಾಳಿಮಾತೆಗೆ ನಮ್ಮನ್ನು ಬಲಿ ಕೊಡುತ್ತಾಳೆ ಎಂಬ ಭಯವೋ!

ಹೌದು, ಸ್ನಾನವಾದ ಮೇಲೆ ನಮ್ಮನ್ನೆಲ್ಲಾ ಬಲಿ ಕೊಡುತ್ತಾಳೆ. ನೀನು ಏನು ಮಾಡಬಲ್ಲೆ?

7

ಇಂತಹ ಕಷ್ಟದ ಪರಿಸ್ಥಿತಿಯಲ್ಲಿಯೂ ನಕ್ಕೀರನು ಧೃತಿಗೆಡದೆ ಸುಬ್ರಹ್ಮಣ್ಯ ಸ್ವಾಮಿಯ ಕೀರ್ತನೆ ಮಾಡಲು ಆರಂಭಿಸಿದ.

8

ಭಕ್ತರನ್ನು ಕಾಪಾಡುವ ದಯಾಳು ಭಗವಂತ. ನಕ್ಕೀರನ ಮೊರೆಯನ್ನು ಕೇಳಿ, ಅವನನ್ನೂ ಅಲ್ಲಿದ್ದ ಇತರ ಬಂಧಿತರನ್ನೂ ಕಾಪಾಡಲು ತೀರ್ಮಾನಿಸಿದ.



ಅವನ ಶೂಲಾಯುಧ ಸಿಡಿಲಿನಂತೆ ಎರಗಿ ಬಂದು ಗುಹೆಯನ್ನು ಭೇದಿಸಿತು. ಗುಹೆ ಬಾಗಿಲು ತೆರೆದುದೇ ತಡ, ಸೆರೆಯಾಳುಗಳೆಲ್ಲಾ ಬಿಡುಗಡೆ ಹೊಂದಿದರು.



ಇದನ್ನೆಲ್ಲಾ ನೋಡಿದ ರಾಕ್ಷಸಿಗೆ ದಿಗ್ಭ್ರಮೆಯಾಯಿತು.



ಅವಳು ಹಾಗೆ ಯೋಚಿಸಿದ ಕೂಡಲೇ, ಆ ಆಯುಧ ಅವಳತ್ತ ಬಂದು, ಅವಳ ಹೃದಯವನ್ನು ಭೇದಿಸಿತು. ಅವಳು ಆ ಸ್ಥಳದಲ್ಲೇ ಸತ್ತುಬಿದ್ದಳು.